ಓ.ಎಸ್ **315/2013**

ಡಿ.ಡಬ್ಲ್ಯೂಃ **01.**

ದಿನಾಂಕಃ **30.09.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ವಾದಿ ಪರ ಶ್ರೀ ಸಿ.ಎಸ್.ಎಸ್. ವಕೀಲರಿಂದಃ**

ದಾವೆಯನ್ನು ಯಾವ ಕಾರಣಕ್ಕಾಗಿ ಹೂಡಿದ್ದಾರೆ ಎಂದರೆ ಸಾಕ್ಷಿ ಆಸ್ತಿಯಲ್ಲಿ ಸರಿಯಾಗಿ ಮಾಡಿಲ್ಲ ಎಂದು ದಾವೆ ಹೂಡಿರುತ್ತಾರೆ. ನನ್ನ ವಕೀಲರ ಮುಖಾಂತರ ವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ನಮ್ಮ ಮನೇಲಿ ನಾನು ಒಬ್ಬನೇ ಪದವಿದಾರನು ಎಂದರೆ ಸಾಕ್ಷಿ ನಾನು ಎಸ್.ಎಸ್.ಎಲ್.ಸಿ ಅನುತ್ತೀರ್ಣ ಎಂದು ನುಡಿಯುತ್ತಾರೆ. ನಮ್ಮ ತಂದೆಯವರಿಗೆ ಓದು ಬರಹ ಬರುತ್ತಿತ್ತು ಎಂದರೆ ಸರಿ. ಮೂಲವಾಗಿ ನಾನು ನಮ್ಮ ತಂದೆ ನಮ್ಮ ಕುಟುಂಬದವರು ವ್ಯಾಪಾರಸ್ಥರು ಎಂದರೆ ಸರಿ. ಈ ದಾವೆ ಹೂಡಿರುವ ಮೃತ ವಾದಿ ಮತ್ತು ಸಹೋದರಿಯರು ವ್ಯಾಪಾರಸ್ಥರು ಎಂದರೆ ಸರಿಯಲ್ಲ. ಸಾಕ್ಷಿ ಅನುರಾಧ ಎಂಬ ನಮ್ಮ ಸಹೋದರಿ ಮಾತ್ರ ವ್ಯಾಪಾರಕ್ಕೆ ಬರುತ್ತಿದ್ದು ಎಂದು ನುಡಿಯುತ್ತಾರೆ ಮುಂದುವರೆದು ಮೃತ ವಾದಿ ಮತ್ತು ನಾವು ಒಟ್ಟಿಗೆ ವ್ಯಾಪಾರ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ವಾದಿ ಮತ್ತು ಸಹೋದರಿಯರು ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು, ನಾನು ಮತ್ತು ನನ್ನ ಮಾತ್ರ ಗಲ್ಲಾ ಮೇಲೆ ಕುಳಿತಿರುತ್ತಿದ್ದೇವು ಎಂದರೆ ಸರಿ. ಹಣದ ವ್ಯವಹಾರ ನನ್ನ ಮತ್ತು ನಮ್ಮ ತಂದೆದು ಮಾತ್ರ ಮೃತ ವಾದಿ ಮತ್ತು ಸಹೋದರಿಯರು ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮೃತ ವಾದಿ ಚುರುಕಾದ ವ್ಯಕ್ತಿ ಅಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ 11.03.1999 ರಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ತಾಯಿ ನಮ್ಮ ತಂದೆ ತೀರಿಹೋದ ನಂತರದಲ್ಲಿ ಮರಣ ಹೊಂದಿರುತ್ತಾರೆ.

ನಮ್ಮ ಕುಟುಂಬಕ್ಕೆ ಯಾವುದೇ ಜಮೀನು ಇತ್ತು ಎಂದರೆ ಸರಿಯಲ್ಲ. ನಮ್ಮ ತಂದೆ ಯಾವುದೇ ಜಮೀನಿನನ್ನು ಮಾರಾಟ ಮಾಡಿರುವುದಿಲ್ಲ. ನಮ್ಮ ಕುಟುಂಬದಲ್ಲಿ ಒಟ್ಟು ಕುಟುಂಬದ ಆಸ್ತಿಗಳ ವಿಭಾಗ ಆಗಿರುವುದಿಲ್ಲ ಎಂದರೆ ಸಾಕ್ಷಿ 1993 ರಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದರೆ ದೃಢೀಕೃತ ಪ್ರತಿಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಏನು ತಿಳಿಯದೇ ನಮ್ಮ ಅಣ್ಣನ ಬಳಿ ಅಸಲು ವಿಭಾಗ ಇದೆ ಎಂದು

ನ್ಯಾಯಾಲಯಕ್ಕೆ ಹಾಜರು ಪಡಿಸುವಂತೆ ನೋಟಿಸ್ ನೀಡಿರುತ್ತೇವೆ ಎಂದರೆ ಸಾಕ್ಷಿ ಅಸಲು ಪತ್ರ ಬಳಿ ಇದ್ದ ಕಾರಣ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ನೋಟೀಸ್ ಗೆ 17.04.2018 ರಂದು ಅಂತಹ ಯಾವುದೇ ದಾಖಲೆ ನನ್ನ ಬಳಿ ಇಲ್ಲ, ಇದ್ದರೆ 5 ನೇ ಪ್ರತಿವಾದಿಯ ಬಳಿ ಇರುತ್ತದೆಯೆಂದು ಉತ್ತರ ನೀಡಿರುತ್ತಾರೆಂದರೆ ಸಾಕ್ಷಿ ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯಲ್ಲಿ ನಾವು ಎಲ್ಲರೂ ಹುಟ್ಟಿ ಬೆಳದಂತಹ ಹಾಗೂ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದಂತಹ ಮನೆ ಎಂದರೆ ಸರಿ. ನಮ್ಮ ತಂದೆಯವರು ಸದರಿ ಮನೆಗೆ ಯಜಮಾನರಾಗಿದ್ದರು ಎಂದರೆ ಸರಿ. ಮೃತ ವಾದಿಯವರ ಮದುವೆ ನಂತರ ಅವರ ಕುಟುಂಬದವರಿಗೆ ಒಟ್ಟು ಕುಟುಂಬದಲ್ಲಿ ವಾಸ ಮಾಡಲು ನಾವುಗಳು ಬಿಡಲಿಲ್ಲ ಎಂದರೆ ಸುಳ್ಳು. ಆದ ಕಾರಣ ಮೃತ ವಾದಿ ಮತ್ತು ಅವರ ಹೆಂಡತಿ ಮನೆಯ 1 ನೇ ಮಹಡಿಯ ಒಂದು ಭಾಗದಲ್ಲಿ ವಾಸ ಮಾಡಲು ಶುರುಮಾಡಿದರು ಎಂದರೆ ಸಾಕ್ಷಿ 1993 ರಲ್ಲಿ ಆದಂತಹ ವಿಭಾಗ ಪತ್ರದಲ್ಲಿ ವಾಸ ಮಾಡಲು ಶುರು ಮಾಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಮರಣ ಶಾಸನ ಪತ್ರ 1999 ರಲ್ಲಿ ಆಗಿರುತ್ತದೆ. 1993 ರ ವಿಭಾಗ ಪತ್ರವನ್ನು ನೋಂದಾಯಿಸಲು ನಮಗೆ ತೊಂದರೆ ಇತ್ತಾ ಎಂದರೆ ನನಗೆ ಆ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಸಲು ವಿಭಾಗ ಪತ್ರ ಏನಾಯಿತು ಎಂದರೆ ಸಾಕ್ಷಿ ನಾನು ನಮ್ಮ ತಂದೆಯ ಬಳಿ ಅದನ್ನು ವಿಚಾರಿಸಿದ್ದು ಅವರು ಅದನ್ನು ಮೃತ ವಾದಿಯ ಬಳಿ ನೀಡಿರುತ್ತೇನೆಂದು ನನಗೆ ತಿಳಿಸಿರುತ್ತಾರೆ. ಈ ದಾವೆ ಹೂಡುವ ಮೊದಲು ಹಾಗೂ ಪ್ರಸ್ತುತವಾಗಿಯೂ ಮೃತ ವಾದಿಯ ಕುಟುಂಬದವರು ದಾವಾ ಆಸ್ತಿಯ 1 ನೇ ಮಹಡಿಯ ಒಂದು ಭಾಗದಲ್ಲಿ ವಾಸಸಿರುತ್ತಾರೆಂದರೆ ಸರಿ. ನಮ್ಮ ತಂದೆಯವರು ಅವರು ಜೀವಂತವಾಗಿರುವಾಗಿಯೂ ನನ್ನ ಜೊತೆ ಇದ್ದರು ಎಂದರೆ ಸರಿ. ಅವರು ತೀರಿಯುವ 6 ತಿಂಗಳ ಹಿಂದಿನಿಂದ ಹಾಸಿಗೆ ಹಿಡಿದಿದ್ದರು ಎಂದರೆ ಸುಳ್ಳು. ಪ್ರಾಪಂಚಿಕ ಜ್ಞಾನವನ್ನು ಕಳೆದುಕೊಡಿದ್ದರು ಎಂದರೆ ಸುಳ್ಳು. ಆದಕಾರಣ ನನ್ನ ಮೇಲೆ ಅವಲಂಬಿತರಾಗಿದ್ದರು ಎಂದರೆ ಸರಿಯಲ್ಲ. ಅವರ ಮೇಲೆ ನನ್ನ ಪೂರ್ಣ ಅತೋಟಿ ಇತ್ತು ಎಂದರೆ ಸುಳ್ಳು. ಮೃತ ವಾದಿಗೆ ತಿಳುವಳಿಕೆ, ಪ್ರಾಪಂಚಿಕ ಜ್ಞಾನ ಕಡಿಮೆ ಇದ್ದಕಾರಣ ಅದನ್ನು

ದುರಪಯೋಗ ಪಡಿಸಿಕೊಂಡು ನನ್ನ ತಂದೆಯಿಂದೆ ಹಣಕಾಸಿನ ಒಳ್ಳೆಯ ಲಾಭವನ್ನು ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ದಿಃ11.03.1999 ರಲ್ಲಿ ನನ್ನ ತಂದೆ ಮರಣ ಹೊಂದಿದ್ದು. ವಿಲ್ ನ್ನು 10.03.1999 ರಂದು ಬರೆದಿರುತ್ತಾರೆ. ನನ್ನ ತಂದೆ ಮರಣ ಹೊಂದುವ ದಿನದ ವರೆಗೂ ಓಡಾಡಿಕೊಂಡು, ಆರೋಗ್ಯವಾಗಿ ಚೆನ್ನಾಗಿದ್ದರು. ದಿಃ23.01.1999 ರಂದು ವಿಲ್ ನ್ನು ಬರೆದಿದ್ದು, 10.03.1999 ರಲ್ಲಿ ನೋಂದಣಿ ಮಾಡಿಸಲಾಗಿರುತ್ತದೆ.(ಇದನ್ನು ಸ್ವತಃ ಸಾಕ್ಷಿಯೇ ನುಡಿದಿರುತ್ತಾರೆ). ನಮ್ಮ ತಂದೆಯವರು 23.01.1999 ರಲ್ಲಿ ಮಾಡಿಸಿರುವ ವಿಲ್ ನ್ನು ಕೈ ಬರಹದಲ್ಲಿ ಬರೆಸಿದ್ದರೋ ಅಥವಾ ಬೆರಳಚ್ಚು ಮಾಡಿಸಿದ್ದರೋ ಎಂದರೆ ನನಗೆ ನೆನಪಿಲ್ಲ ಎಂದು ನುಡಿದು ನಂತರ ಅವಾಗ ಬೆರಳಚ್ಚು ಇರಲಿಲ್ಲ ಕೈಬರಹದಲ್ಲಿ ಬರೆಸಿರಬಹುದು ನನಗೆ ಗೊತ್ತಿಲ್ಲ.

ದಿಃ10.03.1999 ರಲ್ಲಿ ನೋಂದಾಯಿಸಿದ ವಿಲ್ ನ್ನು ನಮ್ಮ ತಂದೆ ಬಳಿಯೇ ಇಟ್ಟುಕೊಂಡಿದ್ದರು. ಸದರಿ ವಿಲ್ ನೋಂದಾಯಿಸಿದ 24 ಗಂಟೆಯ ಒಳಗೆ ನಮ್ಮ ತಂದೆ ತೀರಿಕೊಂಡಿರುತ್ತಾರೆಂದರೆ ಸರಿ. ಹೃದಯಘಾತವಾಗಿ ಮರಣ ಹೊಂದಿರುತ್ತಾರೆ. ಈಗ ನಾನು ಬೆಂಗಳೂರಿನಲ್ಲಿ ವಾಸ ಇರುತ್ತೇನೆ. ನಾನು ಹುಣಸೂರಿನಲ್ಲಿ ವಾಸವಿದ್ದ ಬೀದಿಯಲ್ಲಿ ನಮ್ಮ ಜನಾಂಗದವರು ಜಾಸ್ತಿ ಎಂದರೆ ಸರಿ. ನಮ್ಮ ತಂದೆ ವಿಲ್ ಬರೆದಿದ್ದರೆ ನಮ್ಮ ಜನಾಂಗಕ್ಕೆ ಗೊತ್ತಾಗಿರುತ್ತದೆಂದರೆ ಸರಿ. ಆದರೂ ನಮ್ಮ ತಂದೆ ಮರಣ ಹೊಂದಿ 14 ವರ್ಷ ವರೆಗೆ ಅದರಲ್ಲಿರುವ ಆಸ್ತಿಗಳನ್ನು ಪಡೆಯಲು ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲಿ ಸಾಕ್ಷಿ ಮುಂದುವರೆದು 2003 ರಲ್ಲಿ ವಿಲ್ ನಲ್ಲಿ ಬರೆದಂತಹ ಅಂಗಡಿಯನ್ನು ಮಾರಾಟ ಮಾಡಿರುತ್ತೇನೆ. ದಾವಾ ಸ್ವತ್ತುನ್ನು ನಮ್ಮ ತಂದೆ ಮರಣಹೊಂದಿ 14 ವರ್ಷದ ನಂತರ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇನೆ. ನಾನು ಮಾಡಿರುವ ಮೋಸ ನಮ್ಮ ಜನಾಂಗದವರಿಗೆ ತಿಳಿದುಬಿಡಿತ್ತದೆಂದು ಸದರಿ ವಿಲ್ ನ ವಿಚಾರ ಮುಚ್ಚಿಟ್ಟಿದ್ದೇನು ಎಂದರೆ ಸುಳ್ಳು. ನಿಪಿ-2 ಸೃಷ್ಟಿ ಮಾಡದ ಮರಣ ಶಾಸನವಾಗಿದ್ದರೆ ನಮ್ಮ ತಂದೆ ಮರಣ ಹೊಂದಿದ ನಂತರದಲ್ಲಿಯೇ ಆಸ್ತಿಯನ್ನು ಸ್ವಾಧೀನ ಪಡೆಯುತ್ತಿದ್ದೆ ಎಂದರೆ ಸಾಕ್ಷಿ ನನ್ನ ಸಾಲ ಜಾಸ್ತಿ ಆದಕಾರಣ ಹಣ ಇರಲಿಲ್ಲ ಅದಕ್ಕೆ ಖಾತೆ ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. 2003 ರಲ್ಲಿ ಅಂಗಡಿಯನ್ನು ಮಾರಾಟ ಮಾಡಿರುತ್ತೇನೆ ಎಂದು ನಾನು ನುಡಿದಿದ್ದು ಆದರೆ ಖಾತೆ ಬದಲಾವಣೆಗೆ ಹಣ ಜಾಸ್ತಿ ಬೇಕಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ನನ್ನ ಕಾನೂನು ಬಾಹಿರ ಚಟುವಟಿಕೆಗಳನ್ನು ಜನ ಮರೆತ್ತಿದ್ದೀರೆ ಎಂದು ಭಾವಿಸಿ 14 ವರ್ಷದ ನಂತರ ಮರಣ ಶಾಸನವನ್ನು ಹೊರಗೆ ತಂದೆನು ಎಂದರೆ ಸರಿಯಲ್ಲ. ನನ್ನ ತಂದೆ ತೀರಿದ ನಂತರ ಅಂಗಡಿ ವ್ಯವಹಾರವನ್ನು ನಾನು ಮುಂದುವರೆಸುತ್ತೇನೆ ಎಂದರೆ ಸರಿ ಸಾಕ್ಷಿ ಮುಂದುವರೆದು ನನ್ನ ಭಾಗದಲ್ಲಿ ನಾನು ವ್ಯಾಪಾರ ಮಾಡಿರುತ್ತೇನೆಂದು ನುಡಿಯುತ್ತಾರೆ. 2012 ನೇ ಇಸ್ವೀಯಲ್ಲಿಯೂ ದಾವಾ ಆಸ್ತಿಯ ಖಾತಾ ನಮ್ಮ ತಂದೆಯವರ ಹೆಸರಿನಲ್ಲಿಯೇ ಇತ್ತು ಎಂದರೆ ಸರಿ. ನಾನು 2012 ರಲ್ಲಿ ಮರಣ ಶಾಸನ ಪತ್ರವನ್ನು ಹೊರಗೆ ತಂದು ಖಾತಾ ಬದಲಾವಣೆಗೆ ಪ್ರಯತ್ನ ಪಟ್ಟಿರುತ್ತೇನೆ ಎಂದರೆ ಸುಳ್ಳು. ದಿಃ26.07.2012 ರಲ್ಲಿ ಮೃತ ವಾದಿ ಮತ್ತು ಅವರ ಮಕ್ಕಳು ಪುರಸಭೆಗೆ ಖಾತಾ ಬದಲಾವಣೆ ಮಾಡಬಾರದು ಎಂದು ಲಿಗಲ್ ನೋಟಿಸ್ ನೀಡಿರುತ್ತಾರೆಂದರೆ ಸರಿ.

ದಿಃ05.10.2012 ರಲ್ಲಿ ಹುಣಸೂರು ಟೌನ್ ಮುನ್ಸಿಪಾಲಟಿಯವರ ವಕೀಲರಿಗೆ ಸಲಹೆ ಕೇಳಿದರು ಎಂದರೆ ಸರಿ. ದಿಃ13.10.2012 ರಲ್ಲಿ ಟಿ.ಎಮ್.ಸಿ ಯವರಿಗೆ ಸದರಿ ಖಾತೆ ಬದಲಾವಣೆ ಬರುವುದಿಲ್ಲ ಎಂದು ಉತ್ತರ ನೀಡಿರುತ್ತಾರೆಂದರೆ ಸರಿ. ಸದರಿ ಎಲ್ಲಾ ಕಾನೂನಿನ ಕ್ರಮಗಳನ್ನು ತೆಗೆದುಕೊಂಡರು ಸಹ ನನ್ನ ಆಮೀಷಕ್ಕೆ ಒಳಗಾಗಿ ಮುನ್ಸಿಪಾಲಟಿಯವರು ನನ್ನ ಹೆಸರಿಗೆ ಖಾತೆ ಬದಲಾಯಿಸಿದರು ಎಂದರೆ ಸುಳ್ಳು. ದಿಃ21.03.2013 ರಂದು ನನ್ನ ಹೆಸರಿಗೆ ಪುರಸಭೆಯವರು ಖಾತೆ ಬದಲಾಯಿಸಿದರು ಎಂದರೆ ಸರಿ. ದಿಃ 21.03.2013 ರಲ್ಲಿ ಖಾತೆ ಬದಲಾವಣೆ ಆದ ದಿನದಂದೆ ನಮ್ಮ ಮಕ್ಕಳ ಹೆಸರಿಗೆ ನೋಂದಾಯಿತ ದಾನ ಪತ್ರ ಬರೆದಿರುತ್ತೇನೆ ಎಂದರೆ ಸರಿ. ತದನಂತರ ಅಂದಿನ ದಿನವೇ ಪುರಸಭೆಯಲ್ಲಿ ನಮ್ಮ ಮಕ್ಕಳ ಹೆಸರಿಗೆ ನೋಂದಾಯಿತ ದಾನ ಪತ್ರದ ಆಧಾರದ ಮೇಲೆ ಖಾತಾ ಬದಲಾವಣೆ ಮಾಡಿಸಿರುತ್ತೇನೆಂದರೆ ಸರಿ.

ಮೃತ ವಾದಿ ನಮ್ಮ ತಂದೆ ಬರೆದಿರುವ ಮರಣ ಶಾಸನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನನಗೆ ಆದಂತಹ ಖಾತೆಗಳು ಸೃಷ್ಟಸಿಕೊಂಡಂತಹ ದಾಖಲೆಗಳು ಎಂದರೆ ಸರಿಯಲ್ಲ. ಆದಕಾರಣ ಮೃತವಾದಿ ನಿಪಿ-6 ಮತ್ತು 7 ರಂತೆ ಅಸೆಸ್ ಮೆಂಟ್ ಪ್ರತಿಯನ್ನು ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ಅಧಿಕಾರಿಗಳೊಂದಿಗೆ ಶಾಮೀಲಾಗಿ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದರಿಂದ ಪುರಸಭೆ ಮುಖ್ಯ ಅಧಿಕಾರಿ ನಿಪಿ-6 ಮತ್ತು 7 ಕ್ಕೆ ರುಜು

ಮಾಡಲು ತಿರಸ್ಕಾರ ಮಾಡಿದರು ಎಂದರೆ ನನಗೆ ಗೊತ್ತಿಲ್ಲ.

ದಿಃ27.05.2013 ರಂದು ಪುರಸಭೆ ಮೃತವಾದಿ ವಿಲ್ ಮೂಲಕ ಮಾಡಿದಂತಹ ಖಾತೆ ರದ್ದುಗೊಳಿಸಿ ಎಂದು ನೋಟಿಸ್ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ಮೃತ ವಾದಿ ಮತ್ತು ಅವರ ಕುಟುಂಬದವರು ದಾವಾ ಆಸ್ತಿಯ 1 ನೇ ಮಹಡಿಯ ಭಾಗದಲ್ಲಿ ವಾಸಿಸ್ತಿತ್ತಿದ್ದಾರೆಂದು ನಮೂದು ಇರುತ್ತದೆಂದರೆ ಸರಿ. ಇಂದಿಗೂ ಸಹ ಮೃತ ವಾದಿ ಅವರ ಕುಟುಂಬದವರಿಗೆ ಅದು ಒಂದೇ ಜಾಗ ವಾಸಿಸಲು ಇದೇ ಎಂದರೆ ಸರಿ. ದಿಃ23.01.1999 ರಂದು ಬರೆದಿರುವ ವಿಲ್ ನಲ್ಲಿರುವ ಆಸ್ತಿಯನ್ನು ಖಾತೆ ಮಾಡಿಸಿಕೊಡಿರಾ ಅಥವಾ ಈಡೀ ಆಸ್ತಿಯನ್ನೇ ಖಾತೆ ಬದಲಾವಣೆ ಮಾಡಿಸಿಕೊಂಡಿರಾ ಎಂದರೆ ಸಾಕ್ಷಿ ನನ್ನ ಭಾಗಕ್ಕೆ ಬರೆದಂತಹ ಆಸ್ತಿಯನ್ನು ಮಾತ್ರ ಬದಲಾವಣೆ ಮಾಡಿಸಿಕೊಂಡಿರುತ್ತೇನೆ. ಹಳೆ ಖಾತೆ ನಂಬರ್ 474 ಹೊಸ ನಂಬರ 1251 ರ ಆಸ್ತಿ ಇರುವುದು 40x50 ಎಂದರೆ ಸರಿ. ಸಾಕ್ಷಿಗೆ ನಿಪಿ-6 ನ್ನು ತೋರಿಸಿ ಎಷ್ಟು ವಿಸ್ತೀರ್ಣ ಕ್ಕೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ದಾಖಲೆಯನ್ನು ಪರಿಶೀಲಿಸಿ 20x50 ಮತ್ತು 20x50 ಕ್ಕೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಗೆ ಯಾವ ಭಾಗ ಬಂದಿದೆ ಎನ್ನುವ ಬಗ್ಗೆ ಯಾವುದಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನನ್ನ ಭಾಗಕ್ಕೆ ಬಂದಿರುವ ಆಸ್ತಿಯ ದಾಖಲೆಗಳನ್ನು ನೀಡಿರುತ್ತೇನೆಂದು ನುಡಿಯುತ್ತಾರೆ. ದಾವಾ ಆಸ್ತಿ ನೆಲ ಅಂತಸ್ತು ಸುಮಾರು 67 ವರ್ಷಗಳದ್ದು ಎಂದರೆ ಸರಿ. ಸದರಿ ಆಸ್ತಿಯ ಪಶ್ಚಿಮ ಭಾಗದಲ್ಲಿ ಮನೆಗೆ ಸೇರಿದಂತೆ 1 ನೇ ಮಹಡಿಗೆ ಹೋಗುವಂತೆ ಮೆಟ್ಟಲು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯನ್ನು ರಿಪೇರಿ ಮಾಡಲು ಹೋದರೆ ಮೇಲಿನ ಭಾಗ ಬೀಳುತ್ತದೆಂದರೆ ಸರಿ. ನನಗೆ ಸೇರಿದಂತಹ ಒಂದು ಅಂಗಡಿ ಮಳಿಗೆಯನ್ನು ಶೇಟ್ ಗೆ ಮಾರಾಟ ಮಾಡಿರುತ್ತೇನೆ. ನನ್ನ ಇಬ್ಬರು ಹೆಣ್ಣು ಮಕ್ಕಳು ಬೆಂಗಳೂರು ವಾಸಿಗರು ಎಂದರೆ ಸರಿ. ನಾನು ನನ್ನ ಹೆಣ್ಣು ಮಕ್ಕಳ ಮನೇಲಿ ವಾಸ ಇರುತ್ತೇನೆಂದರೆ ಸರಿ. ನೆಲ ಅಂತಸ್ತಿನ ಆಸ್ತಿಯನ್ನು ಮಾರಾಟ ಮಾಡಿ ಹುಣಸೂರಿಂದ ಹೋಗುವ ವಿಚಾರದಲ್ಲಿರುತ್ತೇನೆಂದರೆ ಸರಿಯಲ್ಲ. ಆಸ್ತಿಯನ್ನು ಮಾರಾಟ ಮಾಡುತ್ತೇನೆಂದು ಜನಗಳಿಗೆ ತಿಳಿಸಿರುತ್ತೇನೆಂದರೆ ಸರಿಯಲ್ಲ. ಪುರಸಭೆಯವರು ನನ್ನ ಹೆಸರಿಗೆ ಖಾತೆ

ಮಾಡುವ ಸಂದರ್ಬದಲ್ಲಿ ವಿಲ್ ಪ್ರಕಾರ ಉಳಿದ ಆಸ್ತಿ ಮೃತ ವಾದಿಗೆ ಸೇರಿರುವ ಬಗ್ಗೆ ತೋರಿಸಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ಮೃತ ವಾದಿಯ ಕುಟುಂಬದವರಿಗೆ ಮೇಲೆ ಇರುವಂತಹ ಅವರ ಭಾಗಕ್ಕೆ ಹೋಗಲು ಪಶ್ಚಿಮ ಭಾಗದಲ್ಲಿ ಮೆಟ್ಟಿಲುಗಳು ಇದೆ ಎಂದು ನಮೂದು ಇರುತ್ತದೆಂದರೆ ಸರಿ. ಸದರಿ ಮೆಟ್ಟಿಲು ಇರುವ ಜಾಗವು ಸಹ 40x50 ರ ವಿಸ್ತೀರ್ಣದಲ್ಲಿ ಸೇರಿರುತ್ತದೆಂದರೆ ಸರಿ. ದಾವಾ ಆಸ್ತಿಯ ಪೂರ್ಣ ವಿಸ್ತೀರ್ಣದ ಮೇಲೆ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿ. 40x50 ವಿಸ್ತೀರ್ಣ ನನಗೆ ಸೇರಿದ್ದು ಎಂದು ಮೆಟ್ಟಿಲುಗಳನ್ನು ತೆರವುಗೊಳಿಸಿದರೆ ವಾದಿಗಳಿಗೆ ಮೇಲೆ ಹೋಗಲು ಜಾಗ ಇರುವುದಿಲ್ಲ ಎಂದರೆ ಸರಿ.

ಒಂದಿಷ್ಟು ಹಣ ನೀಡಿದರೆ ವಾದಿಯ ಕುಟುಂಬದವರು ಹೋಗುತ್ತಾರೆಂದು ಅವರಿಗೆ ತೊಂದರೆ ನೀಡಲು ಪ್ರಯತ್ನ ಪಟ್ಟಿರುತ್ತೀರಿ ಎಂದರೆ ಸುಳ್ಳು. ಕೆಳಗೆ ನನ್ನ ಭಾಗವನುನ ಮೆಸ್ ನವರಿಗೆ ಬಾಡಿಗೆ ನೀಡಿರುತ್ತೇನೆಂದರೆ ಸರಿ. ಸದರಿ ಕಾರಣ ವಾದಿಯವರ ಕುಟುಂಬದವರಿಗೆ ಮೇಲುಗಡೆ ವಾಸಿಸಲು ಆಗುತ್ತಿಲ್ಲ ಹಾಗೂ ತೊಂದರೆ ಆಗುತ್ತದೆ ಎಂದರೆ ಸುಳ್ಳು. ನಾನು ಮೆಸ್ ನವರಿಗೆ ಬಾಡಿಗೆ ನೀಡಿರುವ ಕಾರಣ ಆರ್.ಸಿ.ಸಿ ಎಲ್ಲಾ ಶಿತಿಲಗೊಳ್ಳುತ್ತಿದ್ದೆಂದರೆ ಸುಳ್ಳು. ಪುರಸಭೆ ಖಾತಾ ಬದಲಾವಣೆ ಸಮಯದಲ್ಲಿ ನಾನು ಅಸಲು ಮರಣ ಶಾಸನ ನೀಡಿರುತ್ತೇನೆ. ನನಗೆ ಅಸಲು ಮರಣ ಶಾಸನ ಹಿಂದಿರುಗಿಸಿ ಅವರು ನಕಲು ಪ್ರತಿಯನ್ನು ಇಟ್ಟುಕೊಂಡಿರುತ್ತಾರೆ. ಮೂಲ ಅಸಲು ಮರಣ ಶಾಸನ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಸಿದ್ದೀರಾ ಎಂದರೆ ಸಾಕ್ಷಿ ನಾನು ಬೆಂಗಳೂರಿನಿಂದ ಬರುವಾಗ ಕಳೆದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸಾಮ್ಯಾನ್ಯವಾಗಿ ವಿಲ್, ಕ್ರಯ ಪತ್ರ ಬೆಲೆ ಬಾಳುವ ಕಾಗದ ಪತ್ರಗಳು ಎಂದರೆ ಸರಿ. ಸದರಿ ಬಗ್ಗೆ ನಾನು ಹುಣಸೂರಿನಲ್ಲಿ ದೂರನ್ನು ದಾಖಲಿಸಿರುತ್ತೇನೆ. ಸದರಿ ಬಗ್ಗೆ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ.

ನಮ್ಮ ತಂದೆ ವಿಲ್ ನೋಂದಣಿ ಆಗುವ ಕಾಲದಲ್ಲಿ ಉಪ ನೋಂದಣಿ ಕಛೇರಿಗೆ ಹೋಗಿರುತ್ತಾರೆ. 5-15 ನಿಮಿಷಕ್ಕೆ ವಿಲ್ ನಮೂದು ಆಗಿದ್ದು ನಮ್ಮ ತಂದೆ ಹಾಗೂ ನಾವುಗಳು 4.30 ಗಂಟೆಗೆ ಹೋಗಿರುತ್ತಾರೆ. ವಿಲ್ ನ್ನು ರಾಮಚಂದ್ರಯ್ಯ ಎಂಬ ಪತ್ರ ಬರಹಗಾರರು ಬರೆದರು ಎಂದರೆ ಸರಿ. ಸದರಿ ಪತ್ರಕ್ಕೆ 11 ಜನ ಸಾಕ್ಷಿ ಹಾಕಿರುತ್ತಾರೆ.

ಪತ್ರವನ್ನು ಎಷ್ಟು ಹೊತ್ತು ಪತ್ರವನ್ನು ಬರೆದರು ಎಂದರೆ ಸಾಕ್ಷಿ ಜನೇವರಿಯಲ್ಲಿ ಪತ್ರವನ್ನು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆ ಬರೆದಂತಹ ಪತ್ರವಲ್ಲ ನಾನು ಸೃಷ್ಟಿಸಿದಂತಹ ವಿಲ್ ಎಂದರೆ ಸರಿಯಲ್ಲ. ಸದರಿ ವಿಲ್ ನೋಂದಾಯಿಸಲು ನಮ್ಮ ತಂದೆ ಉಪ ನೋಂದಣಿ ಕಛೇರಿಗೆ ಹೋಗಿರುವುದಿಲ್ಲ ಉಪ ನೋಂದಣಿ ಅಧಿಕಾರಿಯನ್ನು ಮನೆಗೆ ಕರೆಸಿ ಅರೆ ಪ್ರಜ್ಞಾ ಸ್ಥಿತಿಯಲ್ಲಿದ್ದ ನಮ್ಮ ತಂದೆಯವರಿಂದ ಬೆರಳಚ್ಚು ಮಾಡಿಸಿರುತ್ತೇನೆಂದರೆ ಸುಳ್ಳು. ನಮ್ಮ ತಂದೆ ರುಜು ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸಮಯದಲ್ಲಿ ಬೆರಳು ನಡುಗುತ್ತಿದ್ದ ಕಾರಣ ಬೆರಳಚ್ಚು ಮಾಡಿರುತ್ತಾರೆ. ಸದರಿ ಸಮಯದಲ್ಲಿ ನಮ್ಮ ತಂದೆಯವರಿಗೆ ಯಾವುದೇ ಕಾಯಿಲೆ ಇರುವುದಿಲ್ಲ. ನಮ್ಮ ತಂದೆಯವರು ವಿಲ್ ನಲ್ಲಿ ತಮಗೆ ಕಾಯಿಲೆ ಇಂದೆ ಎಂದು ಬರೆಸಿರುತ್ತಾರಾ ಎಂದರೆ ಸರಿ. ವಿಲ್ ನಲ್ಲಿ ಬರೆಸಿರುವಾ ವಿಚಾರಗಳನ್ನು ನಮ್ಮ ತಂದೆಯವರೇ ಹೇಳಿ ಬರೆಸಿರುತ್ತಾರೆ ಎಂದರೆ ಸರಿ.

ಸಾಕ್ಷಿಗಳನ್ನು ನಮ್ಮ ತಂದೆಯವರು ಹೇಳಿದ ಮೇರೆಗೆ ನಾನೇ ಆಟೋದಲ್ಲಿ ಕರೆದುಕೊಂಡು ಹೋಗಿರುತ್ತೇನೆ. ಮೃತ ವಾದಿ ನನ್ನ ಸ್ವಂತ ಅಣ್ಣನಾಗಿದ್ದು ಮೋಸ ಮಾಡುವ ಉದ್ದೇಶದಿಂದ ನಿಪಿ-2 ನ್ನು ಸೃಷ್ಟಿಸಿ ನಿಪಿ-6 ಮತ್ತು 7 ರಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆಂದರೆ ಸುಳ್ಳು. ನ್ಯಾಯಾಲಯದ ಮುಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.